## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.969/2023

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಕರಿಬಸಪ್ಪ ಶೇಖರಪ್ಪ ತಳವಾರ್ | CW: 8 | PW: 4 |
| ತಂದೆಯ ಹೆಸರು | : | ಶೇಖರಪ್ಪ ತಳವಾರ್ | | |
| ವಯಸ್ಸು | : | 48 | | |
| ವೃತ್ತಿ | : | ಹೆಡ್ ಕಾನ್ಸಿಟೇಬಲ್ | | |
| ವಾಸಸ್ಥಳ | : | ಹರಿಹರ | | |

ದಿನಾಂಕಃ 11.12.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

ನಾನು ದಿಃ 27.07.2019 ರಿಂದ ದಿಃ 07.06.2024 ರವರೆಗೆ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13.07.2023 ರಂದು ಸಂಜೆ 6.15 ಗಂಟೆಯಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ 1 ರವರು ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ, ಸಿಆರ್.145/2023 ರಂತೆ ಪ್ರಕರಣ ದಾಖಲಿಸಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 9 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿಪಿ 1 ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ 5 ಎಂದು, ಸಾಕ್ಷಿಯ ಸಹಿ ಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎನ್ ಎಸ್ ವಕೀಲರಿಂದಃ-

ದಿಃ 13.07.2023 ರಂದು ಸಂಜೆ 6.15 ಗಂಟೆಯಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ 1 ರವರು ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ, ಸಿಆರ್.145/2023 ರಂತೆ ಪ್ರಕರಣ ದಾಖಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 9 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ಸುಳ್ಳು ದೂರು ಸ್ವೀಕರಿಸಿ, ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.